NSDL

Technology, Trust & Reach

ಟೋಲ್ ಫ್ರೀ ಸಂ.
1800 222 990

# ಠೇವಣಿಗಾಗಿ ಜಾಗರೂಕ ಹೂಡಿಕೆದಾರರ ಮಾರ್ಗದರ್ಶಿ

ನಿಪುಣರಾಗಿರಿ

ಬುದ್ಧಿವಂತರಾಗಿರಿ

ಸರಳೀಕೃತ ಡೀಮ್ಯಾಟ್

NSDL
Technology, Trust & Reach

## ಪರಿವಿಡಿ


### ಎ. ಮೂಲವಿಚಾರಗಳಿಂದ ಆರಂಭಿಸೋಣ ಬನ್ನಿ 2

1. ಕ್ಯಾಪಿಟಲ್ ಮಾರುಕಟ್ಟೆ ಎಂದರೇನು?
2. ಭದ್ರತೆಗಳು ಎಂದರೇನು? ಪ್ರಾಥಮಿಕ ಮತ್ತು ದ್ವಿತೀಯ ಮಾರುಕಟ್ಟೆಗಳೆಂದರೇನು?
3. ಕ್ಯಾಪಿಟಲ್ ಮಾರುಕಟ್ಟೆಗಳಲ್ಲಿ ಎನ್‌ಎಸ್ಡಿಎಲ್ ನ ಪಾತ್ರವೇನು?
4. ಎನ್‌ಎಸ್ಡಿಎಲ್ ಡಿಮ್ಯಾಟ್ ಖಾತೆ ತೆರೆಯುವ ಮಾರ್ಗವೇನು?
5. ನಿಮ್ಮ ಎನ್‌ಎಸ್ಡಿಎಲ್ ಡಿಮ್ಯಾಟ್ ಖಾತೆಯ ಮೂಲಕ ನೀವು ಏನೇನು ಮಾಡಬಹುದು?

### ಬಿ. ಎನ್‌ಎಸ್ಡಿಎಲ್ ಡಿಮ್ಯಾಟ್ ಖಾತೆಯ ಕೊಡುಗೆಗಳು 5

1. ಎನ್‌ಎಸ್ಡಿಎಲ್ ತ್ವರಿತ-ಇ ಸೇವೆ
2. ಎನ್‌ಎಸ್ಡಿಎಲ್ ಮೊಬೈಲ್ ಆಪ್ ಮತ್ತು ಐಡಿಇಎಎಸ್ ಸೇವೆ
3. ಎನ್‌ಎಸ್ಡಿಎಲ್ ಕ್ರೋಡೀಕೃತ ಖಾತೆ ಹೇಳಿಕೆ (ಸಿಎಎಸ್)
4. ಎನ್‌ಎಸ್ಡಿಎಲ್ ಇ-ವೋಟಿಂಗ್ ಸೇವೆ

### ಸಿ. ಜಾಗರೂಕ ಹೂಡಿಕೆದಾರರಾಗಿ 7

1. ನೀವು ಒಬ್ಬ ಜಾಗರೂಕ ಹೂಡಿಕೆದಾರರೇ ಎಂದು ಖಚಿತಪಡಿಸಿಕೊಳ್ಳಿ
2. ನಿಮ್ಮ ಡಿಮ್ಯಾಟ್ ಖಾತೆಯ ಕಾಳಜಿ ವಹಿಸುವುದು

### ಡಿ. ಹೆಚ್ಚಿನ ಮಾಹಿತಿ 9

1. ಸ್ವೀಕರಿಸದ ಲಾಭಾಂಶ / ಷೇರುಗಳಿಗಾಗಿ ಐಇಪಿಎಫ್ ನಿಂದ ಹಿಂಪಾವತಿ ಕ್ಲೇಮು ಮಾಡುವುದು
2. ಭದ್ರತೆಗಳ ವರ್ಗಾವಣೆಗಾಗಿ ಡೀಮ್ಯಾಟ್ ಕಡ್ಡಾಯ
3. ಪಟ್ಟಿಮಾಡದ ಸಾರ್ವಜನಿಕ ಕಂಪನಿಗಳಿಗಾಗಿ ಡಿಮ್ಯಾಟ್ ಕಡ್ಡಾಯ
4. ಹೂಡಿಕೆದಾರರ ಜಾಗೃತಿ ಕಾರ್ಯಕ್ರಮಗಳು
5. ಕುಂದುಕೊರತೆ ಪರಿಹಾರ
6. ಇತರೆ ಉಪಯುಕ್ತ ಸೇವೆಗಳು


ಈ ಪ್ರಕಟಣೆಯು ಎನ್‌ಎಸ್ಡಿಎಲ್ ಹೂಡಿಕೆದಾರರ ಸಂರಕ್ಷಣೆ ನಿಧಿ ಟ್ರಸ್ಟ್ ನ ಒಂದು ಉಪಕ್ರಮ

NSDL
Technology, Trust & Reach

**ಪ್ರಿಯ ಓದುಗರೇ,**

ಎನ್‌ಎಸ್ಡಿಎಲ್ ಮೇಲಿನ ನಿಮ್ಮ ಆಸಕ್ತಿಗಾಗಿ ನಾವು "ಅಭಿನಂಧಿಸುತ್ತೇವೆ".

ನಾವು, ಎನ್‌ಎಸ್ಡಿಎಲ್ ನಲ್ಲಿ, ಪ್ರತಿಯೊಬ್ಬ ಭಾರತೀಯನು ಕೇವಲ ಹೂಡಿಕೆದಾರನಷ್ಟೆ ಅಲ್ಲ ಒಬ್ಬ "ಜಾಗರೂಕ ಹೂಡಿಕೆದಾರ" ಆಗಬೇಕು ಎಂದು ನಂಬುತ್ತೇವೆ. ಈ ಕೈಪಿಡಿ ಓದುವ ನಿಮ್ಮ ನಿರ್ಧಾರವನ್ನು ನಾವು ಶ್ಲಾಘಿಸುತ್ತೇವೆ ಹಾಗೂ ಖಚಿತವಾಗಿಯೂ ಇಲ್ಲಿ ಒದಗಿಸಲಾದ ಮಾಹಿತಿಯಿಂದ ನಿಮಗೆ ಲಾಭವಾಗುತ್ತದೆ ಎಂದು ನಮ್ಮ ನಂಬಿಕೆ. ಈ ಕೈಪಿಡಿಯಲ್ಲಿ ಒದಗಿಸಲಾದ ಮಾಹಿತಿಯು ನೀವು ಒಬ್ಬ "ಜಾಗರೂಕ ಹೂಡಿಕೆದಾರರಾಗಿ" ಮುಂದುವರಿಯಲು ಸಹಾಯ ಮಾಡುತ್ತದೆ.

ಎನ್‌ಎಸ್ಡಿಎಲ್ ಮೇಲಿನ ಕಿರು ಪರಿಚಯದ ಹೊರತಾಗಿ, ನೀವು ಎನ್‌ಎಸ್ಡಿಎಲ್ ಡಿಮ್ಯಾಟ್ ಖಾತೆಯನ್ನು ಪಡೆದ ನಂತರ ನಾವು ಒದಗಿಸುವಂತಹ ವಿವಿಧ ಸೇವೆಗಳ ಸಾರಾಂಶವನ್ನು ನೀಡಿದ್ದೇವೆ. ಒಂದೊಮ್ಮೆ, ನಿಮಗೆ ಹೆಚ್ಚಿನ ಮಾಹಿತಿಯ ಅಗತ್ಯವಿದ್ದರೆ ಅಥವಾ ಯಾವುದೇ ಸ್ಪಷ್ಟೀಕರಣ ಬೇಕಿದ್ದರೆ, ದಯಮಾಡಿ ಮುಕ್ತ ಮನಸ್ಸಿನಿಂದ ನಮ್ಮನ್ನು ಸಂಪರ್ಕಿಸಿ.

**ಅಭಿನಂದನೆಗಳು,**
**ಎನ್‌ಎಸ್ಡಿಎಲ್ ತಂಡ**

## ಎ. ಮೂಲವಿಚಾರಗಳಿಂದ ಆರಂಭಿಸೋಣ ಬನ್ನಿ

### 1) ಕ್ಯಾಪಿಟಲ್ ಮಾರುಕಟ್ಟೆ ಎಂದರೇನು?

ಕ್ಯಾಪಿಟಲ್ ಮಾರುಕಟ್ಟೆ, ಸರಳ ಪದಗಳಲ್ಲಿ ಹೇಳುವುದಾದರೆ ಹೂಡಿಕೆಗಳು ಅಥವಾ ನಿಧಿಗಳಿಗಾಗಿ ಇರುವ ಮಾರುಕಟ್ಟೆ ಎಂದರ್ಥ, ಅಂದರೆ ಯಾರಿಗೆ ತಮ್ಮ ವ್ಯಾಪರ ಉದ್ದೇಶಗಳಿಗಾಗಿ ಹೂಡಿಕೆಗಳ ಅಗತ್ಯವಿರುತ್ತದೆಯೋ ಅವರು ಅಂತಹ ಹೂಡಿಕೆ ನೀಡಲು ಸಿದ್ಧವಿರುವವರನ್ನು ಹುಡುಕುತ್ತಾರೆ. ಇತರೆ ವಾಕ್ಯದಲ್ಲಿ ಹೇಳುವುದಾದರೆ, ಕ್ಯಾಪಿಟಲ ಮಾರುಕಟ್ಟೆ ಎಂದರೆ ವಿವಿಧ ಬಗೆಯ ಹಣಕಾಸಿನ ಲಿಖಿತಗಳ ಮಾರಾಟ ಮತ್ತು ಖರೀದಿಯಲ್ಲಿ ಜನರು ತೊಡಗಿರುವ ಸ್ಥಳ ಎಂದರ್ಥ. ಅದರಲ್ಲಿ ನಿಬಂಧನೆಗಳು (ಸೆಬಿ), ಷೇರು ವಿನಿಮಯ (ಎನ್‌ಎಸ್‌ಇ/ಬಿಎಸ್‌ಎ ಇತ್ಯಾದಿ), ಠೇವಣಿಗಳು (ಎನ್‌ಎಸ್ಡಿಎಲ್/ಸಿಎಸ್ಡಿಎಲ್) ಮತ್ತು ಇತರೆ ಮಧ್ಯಂತರಗಳಾದ ಸ್ಟಾಕ್ ಬ್ರೋಕರ್, ಡಿಪಿಗಳು, ಅನುಪಾಲಕರು, ಮರ್ಚಂಟ್ ಬ್ಯಾಂಕರ್ಸ್ ಇತ್ಯಾದಿಗಳು ಒಳಗೊಂಡಿರುತ್ತವೆ.

### 2. ಭದ್ರತೆಗಳೆಂದರೇನು? ಪ್ರಾಥಮಿಕ ಮತ್ತು ದ್ವಿತೀಯ ಮಾರುಕಟ್ಟೆ ಎಂದರೇನು?

ಭದ್ರತೆಗಳೆಂದರೆ ವಿವಿಧ ಬಗೆಯ ಹಣಕಾಸಿನ ಲಿಖಿತಗಳು ಎಂದರ್ಥ ಅವುಗಳನ್ನು ಕ್ಯಾಪಿಟಲ್ ಮಾರುಕಟ್ಟೆಯಲ್ಲಿ ಟ್ರೇಡ್ ಮಾಡಬಹುದು. ಇತರೆ ವಾಕ್ಯದಲ್ಲಿ ಹೇಳುವುದಾದರೆ, ಇವುಗಳು ಹೂಡಿಕೆ ಆಶಿಸುತ್ತಿರುವವರಿಗಾಗಿ ಹೂಡಿಕೆ ಸರಬರಾಜುದಾರರು ಲಿಖಿತಗಳ ಮೂಲಕ ಒದಗಿಸುವ ಕೊಡುಗೆಗಳು. ಬನ್ನಿ ಒಂದು ಉದಾಹರಣೆಯನ್ನು ನೋಡಿ ಅರ್ಥ ಮಾಡಿಕೊಳ್ಳೋಣ. ಮಿ.ಎ ಒಬ್ಬ ಪ್ರಖ್ಯಾತ ಉದ್ಯಮಿ ಹಾಗು ಎಬಿಸಿ ಲಿಮಿಟೆಡ್ ನಲ್ಲಿ ನಿರ್ವಾಹಕ ನಿರ್ದೇಶಕರು. ಆತನು ಎಬಿಸಿ ಲಿಮಿಟೆಡ್ ಎಂಬ ಹೆಸರಿನಲ್ಲಿ ಒಂದು ಹೊಸ ಸಿಮೆಂಟ್ ಕಾರ್ಖಾನೆ ಆರಂಭಿಸಬೇಕೆಂದಿದ್ದಾನೆ. ಅದಕ್ಕಾಗಿ ಭಾರಿ ಹಣ (ಬಂಡವಾಳ) ಬೇಕಾಗಿರುತ್ತದೆ ಆದರೆ ಅದನ್ನು ಆತನೆ ಅಥವಾ ಎಬಿಸಿ ಲಿಮಿಟೆಡ್ ಕಂಪನಿಯು ತೂಗಿಸಲು ಸಾಧ್ಯವಿಲ್ಲ. ಹಾಗಾಗಿ, ನಿಧಿಗಳ ಹಿಂಪಾವತಿಯಂತೆ ಈಕ್ವಿಟಿ ಷೇರುಗಳನ್ನು ಒದಗಿಸಿ ಕ್ಯಾಪಿಟಲ್ ಮಾರುಕಟ್ಟೆಯನ್ನು ಪ್ರವೇಶಿಸಲು ನಿರ್ಧರಿಸಲಾಯಿತು. ಆದ್ದರಿಂದ, ಸಂಸ್ಥೆಯು ಆರಂಭಿಕ ಸಾರ್ವಜನಿಕ ಕೊಡುಗೆ ಅಥವಾ ಐಪಿಓ ಹೊರತಂದಿತು (ಆರಂಭಿಕ ಏಕೆಂದರೆ ಎಬಿಸಿ ಲಿಮಿಟೆಡ್ ಕಂಪನಿಯು ಸಾರ್ವಜನಿಕರಿಂದ ಭಾರಿ ಪ್ರಮಾಣದಲ್ಲಿ ಹೂಡಿಕೆಯನ್ನು ಆಶಿಸುತ್ತಿದೆ). ಸಾರ್ವಜನಿಕರು ಒಂದು ಒಪ್ಪಂದಿತ ಬೆಲೆಯನ್ನು ಪಾವತಿಸುವ ಮೂಲಕ ಷೇರುಗಳಿಗೆ ಅರ್ಜಿ ಸಲ್ಲಿಸಬಹುದು. ಬಾಕಿ ಉಳಿದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರ, ಕಂಪನಿಯು ತನ್ನ ಬ್ಯಾಂಕ್ ಖಾತೆಯಲ್ಲಿ ಹೂಡಿಕೆಗಳನ್ನು ಸ್ವೀಕರಿಸುತ್ತದೆ ಹಾಗೂ ಅರ್ಜಿದಾರರಿಗೆ ಷೇರುಗಳನ್ನು ಹಂಚಿಕೆ ಮಾಡುತ್ತದೆ. ಆ ಮೂಲಕ ಅವರು ಕಂಪನಿಯ ಷೇರುದಾರರಾಗಿರುತ್ತಾರೆ.

ಮೇಲೆ ವಿವರಿಸಲಾದ, ಒಂದು ಷೇರು ಎಂದರೆ ಒಂದು ಬಗೆ ಭದ್ರತೆಯೇ ಆಗಿರುತ್ತದೆ. ಇತರೆ ಉದಾಹರಣೆಗಳೆಂದರೆ - ಡಿಬೆಂಚರ್ಸ್, ಬಾಂಡುಗಳು, ಮ್ಯುಚುವಲ್ ಫಂಡ್ ಯುನಿಟ್, ವಾಣಿಜ್ಯ ಕಾಗದಪತ್ರಗಳು, ಠೇವಣಿಯ ಪ್ರಮಾಣಪತ್ರಗಳು, ಸರ್ಕಾರಿ ಭದ್ರತೆಗಳು ಇತ್ಯಾದಿಗಳು. ಸಾರ್ವಜನಿಕರಿಗೆ ವಿತರಕರು ಮಾಡುವ ಷೇರುಗಳು ಅಥವಾ ಭದ್ರತೆಗಳ ಹಂಚಿಕೆಯನ್ನು "ಪ್ರಾಥಮಿಕ ಮಾರುಕಟ್ಟೆ" ಎನ್ನುತ್ತಾರೆ. ಷೇರು ವಿನಿಮಯ, ಅಂದರೆ ಈಗಾಗಲೇ ವಿತರಿಸಲಾಗಿ ಮತ್ತು ಟ್ರೇಡ್ ಮಾಡಲಾದ ಭದ್ರತೆಗಳನ್ನು ಟ್ರೇಡಿಂಗ್ (ಖರಿದಿ ಮತ್ತು ಮಾರಾಟ) ಮಾಡಲು ಇರುವ ಮಾರುಕಟ್ಟೆ ಸ್ಥಳ, ಅದನ್ನು "ದ್ವಿತೀಯ ಮಾರುಕಟ್ಟೆ" ಎನ್ನುತ್ತಾರೆ. ಯಾವುದೇ ಷೇರುದಾರರು ಬಿಎಸ್‌ಇ ಅಥವಾ ಎನ್‌ಎಸ್‌ಇ ಗಳಂತಹ ಷೇರು ವಿನಿಮಯಗಳಿಂದ ಒದಗಿಸಲಾದ ಜಾಲತಾಣಗಳಲ್ಲಿ ಸೆಬಿ ಮೂಲಕ ಅಂದರೆ ಒಂದು ನೋಂದಾಯಿತ ಸ್ಟಾಕ್ ಬ್ರೋಕರ್ ಮೂಲಕ ಮಾರಾಟ ಮಾಡುವುದಕ್ಕಾಗಿ ತನ್ನ ಷೇರುಗಳನ್ನು ನೀಡಬಹುದು. ಯಾವ ವ್ಯಕ್ತಿ ಬೇಕಾದರು ಒಪ್ಪಿದ ದರವನ್ನು ಪಾವತಿಸುವ ಮೂಲಕ ತನ್ನ ಸ್ಟಾಕ್ ಬ್ರೋಕರ್ ಮೂಲಕ ಈ ಷೇರುಗಳನ್ನು ಖರೀದಿಸಬಹುದು.

## ೩) ಕ್ಯಾಪಿಟಲ್ ಮಾರುಕಟ್ಟೆಯಲ್ಲಿ ಎನ್ಎಸ್ಡಿಎಲ್ ನ ಪಾತ್ರವೇನು?

ಎನ್ಎಸ್ಡಿಎಲ್, ೧೯೯೬ ರಲ್ಲಿ ಸ್ಥಾಪಿತವಾಯಿತು, ಇಂದು ಪ್ರಪಂಚದ ಅತಿ ದೊಡ್ಡ ಠೇವಣಿಗಳಲ್ಲಿ ಒಂದಾಗಿದೆ. ಒಂದು ಠೇವಣಿ ಸಂಗ್ರಹಣೆಯಾಗಿ, ಅದು ವಿದ್ಯುನ್ಮಾನ ಮಾದರಿಯಲ್ಲಿ ಅಂದರೆ ಅಭೌತಿಕ ಮಾರ್ಗದಲ್ಲಿ ಷೇರುಗಳು ಮತ್ತು ಇತರೆ ಬಗೆಯ ಭದ್ರತೆಗಳ ಹಿಡುವಳಿಯನ್ನು ಸಕ್ರಿಯಗೊಳಿಸುತ್ತದೆ. ಒಂದು ಡಿಮ್ಯಾಟ್ ಖಾತೆ ಹೊಂದಿರುವ ಮೂಲಕ, ವಿದ್ಯುನ್ಮಾನ ಮಾದರಿಯಲ್ಲಿ ಒಬ್ಬರು ತಮ್ಮ ಸ್ವಂತ ಭದ್ರತೆಗಳನ್ನು ಖರೀದಿಸಬಹುದು ಹಾಗೂ ಯಾವುದೇ ಭದ್ರತೆಗಳನ್ನು ತನ್ನ ಡಿಮ್ಯಾಟ್ ಖಾತೆಯಿಂದ ಇತರೆ ಯಾವುದೆ ಡಿಮ್ಯಾಟ್ ಖಾತೆಗೆ ವರ್ಗಾಯಿಸಲೂಬಹುದು.

ಭಾರತೀಯ ಕ್ಯಾಪಿಟಲ್ ಮಾರುಕಟ್ಟೆಗೆ ಎನ್ಎಸ್ಡಿಎಲ್'ನ ಕೊಡುಗೆಯಿಂದಾಗಿ ಪ್ರಪಂಚದಲ್ಲಿನ ಬಹು ವಿಭಾಗಳ ಪ್ರಮುಖ ಕ್ಯಾಪಿಟಲ್ ಮಾರುಕಟ್ಟೆಗಳಲ್ಲಿ ಅದು ಸಹ ಒಂದಾಗಿದೆ. ವಿವಿಧ ಉತ್ಪನ್ನಗಳು ಮತ್ತು ಸೇವೆಗಳು ಮತ್ತು ದೇಶ ವ್ಯಾಪಿ ಸರಿಸಾಟಿ ಇಲ್ಲದೆ ತಲುಪುವ ಅಧುನಿಕ ತಂತ್ರಜ್ಞಾನದ ಅಳವಡಿಕೆಯಿಂದಾಗಿ, ಎನ್ಎಸ್ಡಿಎಲ್ ಹೂಡಿಕೆದಾರರ ಮತ್ತು ಇತರೆ ಮಧ್ಯವರ್ತಿಗಳ ನಂಬುಗೆಯನ್ನು ಗಳಿಸಿದೆ, ಹಾಗಾಗಿ ತನ್ನ ಟ್ಯಾಗ್ ಲೈನಿಗೆ ಸತ್ಯವಾಗಿ ನಿಲ್ಲುತ್ತದೆ - ತಂತ್ರಜ್ಞಾನ, ನಂಬಿಕೆ ಮತ್ತು ಗಮ್ಯ.

ಎನ್ಎಸ್ಡಿಎಲ್ ಹೂಡಿಕೆದಾರರಿಗೆ, ಸ್ಟಾಕ್ ಬ್ರೋಕರ್ಸ್, ಷೇರು ವಿನಿಮಯ, ಅನುಪಾಲಕರು ಇತ್ಯಾದಿಗಳಿಗೆ ತನ್ನ ೨೭೮ ಡಿಪಿ(ಡೆಪಾಸಿಟರಿ ಪಾರ್ಟಿಸಿಪೆಂಟ್ಸ್) ಗಳಿಗಿಂತ ಹೆಚ್ಚಿನ ಜಾಲಬಂಧದ ಮೂಲಕ ವ್ಯಾಪಕ ಸೇವೆಗಳನ್ನು ಒದಗಿಸುತ್ತದೆ. ಹಲವಾರು ದೊಡ್ಡ ಬ್ಯಾಂಕುಗಳು (ರಾಷ್ಟ್ರೀಕೃತ, ಖಾಸಗಿ ಮತ್ತು ಸಹಕಾರಿ), ಸ್ಟಾಕ್ ಬ್ರೋಕರ್ಸ್ ಮತ್ತು ಹಣಕಾಸಿನ ಸಂಸ್ಥೆಗಳು ಸಹ ಎನ್ಎಸ್ಡಿಎಲ್ ಅನ್ನು ಡಿಪಿಗಳಾಗಿ ಸೇರಿಕೊಂಡಿವೆ. ಎನ್ಎಸ್ಡಿಎಲ್ ಡಿಪಿ'ಗಳು ದೇಶಾದ್ಯಂತ ೩೧,೦೦೦ ಕ್ಕಿಂತ ಹೆಚ್ಚಿನ ಸೇವೆಗಳ ಕೇಂದ್ರಗಳಾಗಿ ವ್ಯಾಪಿಸಿ ಕಾರ್ಯನಿರ್ವಹಿಸುತ್ತಿವೆ, ಹಾಗೂ ಕೆಲವು ವಿದೇಶದಲ್ಲೂ ಇವೆ. ಎನ್ಎಸ್ಡಿಎಲ್ ನ ಸಹಭಾಗಿಗಳು ಮತ್ತು ತಮ್ಮ ಸೇವಾ ಕೇಂದ್ರಗಳ ಪಟ್ಟಿ ಎನ್ಎಸ್ಡಿಎಲ್ ವೆಬ್ಸೈಟಿನಲ್ಲಿ ಲಭ್ಯವಿದೆ www.nsdl.co.in.

## ೪) ಒಂದು ಎನ್ಎಸ್ಡಿಎಲ್ ಡಿಮ್ಯಾಟ್ ಖಾತೆ ತೆರೆಯುವ ಮಾರ್ಗವೇನು?

ಒಂದು ಡಿಮ್ಯಾಟ್ ಖಾತೆಯನ್ನು ತೆರೆಯುವುದು ಬಹಳ ಸುಲಭ. ನೀವು ಮಾಡಬೇಕಾದದ್ದೆಲ್ಲಾ ಇಷ್ಟೆ ಎನ್ಎಸ್ಡಿಎಲ್ ಡಿಪಿಗೆ ಭೇಟಿ ನೀಡಿ ಅಲ್ಲಿ ನಿಮಗೆ ಸಂಪೂರ್ಣ ವಿಧಿವಿಧಾನಗಳ ಬಗ್ಗೆ ಸಹಾಯ ಮಾಡಲಾಗುತ್ತದೆ. ನೀವು ಗುರುತಿನ ಪುರಾವೆ ಮತ್ತು ವಿಳಾಸ ಪುರಾವೆ ಸಲ್ಲಿಸಬೇಕಾಗಿರುತ್ತದೆ. ಮುಂದುವರಿದಂತೆ, ಡಿಮ್ಯಾಟ್ ಖಾತೆ ತೆರೆಯಲು ಪ್ಯಾನ್ ಕಾರ್ಡ್ ಕಡ್ಡಾಯವಾಗಿರುತ್ತದೆ. ಇದರ ಜೊತೆಯಲ್ಲಿ, ನೀವು ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ಸಹ ಒದಗಿಸಬೇಕಾಗಿರುತ್ತದೆ.

ನಿಮ್ಮ ಡಿಮ್ಯಾಟ್ ಖಾತೆ ತೆರೆದ ನಂತರ, ನಿಮ್ಮ ಡಿಪಿ ನಿಮಗೆ ಒಂದು ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ, ನಿಮ್ಮ ಡಿಮ್ಯಾಟ್ ಖಾತೆ ಸಂಬಂಧಿತ ವಿವರಗಳನ್ನು ಒಳಗೊಂಡ ಕ್ಲೈಂಟ್ ಮಾಸ್ಟರ್ ವರದಿಯ ಪ್ರತಿ, ಟಾರಿಫ್ ಶೀಟ್ ಮತ್ತು ಫಲಾನುಭವಿ ಮಾಲೀಕರು ಮತ್ತು ಠೇವಣಿ ಸಹಭಾಗಿಗಳ ಹಕ್ಕುಗಳು ಮತ್ತು ಬಾಧ್ಯತೆಗಳನ್ನು ಒದಗಿಸುತ್ತಾರೆ. ದಾಖಲಾದ ನಿಮ್ಮ ವಿವರಗಳು ಸರಿಯಾಗಿವೆ ಎಂದು ಖಾತರಿಪಡಿಸಿಕೊಳ್ಳಲು ನೀವು ಕ್ಲೈಂಟ್ ಮಾಸ್ಟರ್ ವರದಿಯನ್ನು ಪರಿಶೀಲಿಸಬೇಕು. ಒಂದೊಮ್ಮೆ ನೀವು ಷೇರುಗಳು, ಇತ್ಯಾದಿಗಳಲ್ಲಿ ಟ್ರೇಡ್ (ಖರೀದಿ ಮತ್ತು ಮಾರಾಟ) ಮಾಡಬೇಕೆಂದರೆ, ನೀವು ಒಂದು ಟ್ರೇಡಿಂಗ್/ಬ್ರೋಕಿಂಗ್ ಖಾತೆಯನ್ನು ಯಾವುದೇ ಸೆಬಿ ನೋಂದಾಯಿತ ಸ್ಟಾಕ್ ಬ್ರೋಕರ್ ಮೂಲಕ ತೆರೆಯಬೇಕು. ಹೂಡಿಕೆದಾರರ ಲಾಭಕ್ಕಾಗಿ ೩-in-೧ ವ್ಯವಸ್ಥೆಯನ್ನು ಒದಗಿಸುವಂತಹ ಹಲವಾರು ಬ್ಯಾಂಕ್ ಡಿಪಿಗಳಿವೆ (೩-in-೧ ಎಂದರೆ ಒಂದು ಡಿಮ್ಯಾಟ್ ಖಾತೆ, ಟ್ರೇಡಿಂಗ್ ಖಾತೆ ಮತ್ತು ಬ್ಯಾಂಕ್ ಖಾತೆಗಳ ಸಂಯೋಜನೆ ಎಂದರ್ಥ)

## ಙ) ನಿಮ್ಮ ಎನ್ಎಸ್ಡಿಎಲ್ ಡಿಮ್ಯಾಟ್ ಖಾತೆಯ ಮೂಲಕ ಏನೆಲ್ಲಾ ಮಾಡಬಹುದು?

ನಿಮ್ಮ ಎನ್ಎಸ್ಡಿಎಲ್ ಡಿಮ್ಯಾಟ್ ಖಾತೆಯ ಮೂಲಕ ನೀವು ಮಾಡಬಹುದಾದ ಕೆಲವು ಮುಖ್ಯ ಕೆಲಸಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ -

I. ನೀವು ಐಪಿಒ ಗಳು ಮತ್ತು ಎನ್ಎಫ್ಒ ಗಳಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ನಮೂನೆಯಲ್ಲಿ ನಿಮ್ಮ ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ ಅನ್ನು ಸರಿಯಾಗಿ ಸೂಚಿಸುವುದನ್ನು ಮರೆಯಬೇಡಿ. ಶೇರುಗಳನ್ನು ಮತ್ತು ಇತರೆ ಬಗೆಯ ಭದ್ರತೆಗಳನ್ನು ಖರೀದಿಸಲು ಮತ್ತು ಹಿಡಿದಿಟ್ಟುಕೊಳ್ಳಲು ಒಂದೇ ಡಿಮ್ಯಾಟ್ ಖಾತೆಯನ್ನು ಬಳಸಬಹುದು.

II. ನಿಮ್ಮ ಡಿಮ್ಯಾಟ್ ಖಾತೆಯಲ್ಲಿಯೇ ನಿಮಗೆ ಎಲ್ಲಾ ಕಾರ್ಪೊರೇಟ್ ಲಾಭಗಳು (ಬೋನಸ್, ಹಕ್ಕು ಸಮಸ್ಯೆಗಳು ಇತ್ಯಾದಿಗಳು) ಸ್ವಯಂಚಾಲಿತವಾಗಿ ಸ್ವೀಕಾರವಾಗುತ್ತವೆ. ನಗದು ಲಾಭಗಳಾದ ನಿಮ್ಮ ಕಂಪನಿಯಿಂದ ಘೋಷಿಸಿದ ಲಾಭಾಂಶ, ಬಡ್ಡಿ ಅಥವಾ ನಿಮ್ಮ ಬಾಂಡ್ ಹೂಡಿಕೆ ಇತ್ಯಾದಿಗಳ ಅವಧಿ ಪಕ್ವತೆಯಲ್ಲಿ ಪಾವತಿಸತಕ್ಕ ಮೊತ್ತಗಳು ನಿಮ್ಮ ಡಿಮ್ಯಾಟ್ ಖಾತೆಯ ಜೊತೆಯಲ್ಲಿ ಲಿಂಕ್ ಆದ ಬ್ಯಾಂಕ್ ಖಾತೆಗೆ ಜಮೆಯಾಗುತ್ತವೆ. ದಯಮಾಡಿ ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ದಾಖಲಾದ ಬ್ಯಾಂಕ್ ಖಾತೆ ವಿವರಗಳು ಸರಿಯಾಗಿವೇ ಎಂದು ಖಾತರಿಪಡಿಸಿಕೊಳ್ಳಿ.

III. ನೀವು ನಿಮ್ಮ ಡಿಮ್ಯಾಟ್ ಖಾತೆಯನ್ನು ಬಳಸಿಕೊಂದು "ಷೇರುಗಳ ಮೇಲೆ ಸಾಲ" ಸೌಲಭ್ಯವನ್ನು ಪಡೆಯಬಹುದು ಹೂಡಿಕೆಗಳನ್ನು ಮಾರಾಟ ಮಾಡುವ ಅಗತ್ಯವಿಲ್ಲದೆ ನಿಮ್ಮ ಆರ್ಥಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಇಂತಹ ಕೊಡುಗೆಗಳನ್ನು ಹಲವಾರು ಬ್ಯಾಂಕುಗಳು ನೀಡುತ್ತವೆ.

IV. ನೀವು ನಿಮ್ಮ ಡಿಪಿಯ ಮೂಲಕ ಷೇರುಗಳಲ್ಲಿ, ಬಾಂಡುಗಳಲ್ಲಿ, ಡಿಬೆಂಚರ್ಸ್, ಸರ್ಕಾರಿ ಭದ್ರತೆಗಳು, ಸಾರ್ವಭೌಮತ್ವ ಚಿನ್ನದ ಬಾಂಡುಗಳು ಇತ್ಯಾದಿಗಳಲ್ಲಿರುವ ಕಾಗದ ರೂಪದಲ್ಲಿ ಇಟ್ಟುಕೊಂಡ ನಿಮ್ಮ ಎಲ್ಲಾ ಹೂಡಿಕೆಗಳನ್ನು, ಮತ್ತು ಹೇಳಿಕೆ ರೂಪದಲ್ಲಿರುವ ಮ್ಯುಚುವಲ್ ಫಂಡ್ ಯುನಿಟ್ ಗಳನ್ನು ಡಿಮ್ಯಾಟ್ ರೂಪಕ್ಕೆ ವರ್ಗಾಯಿಸಿಕೊಳ್ಳಬಹುದು.

V. ನೀವು ನಿಮ್ಮ ಮ್ಯುಚುವಲ್ ಫಂಡ್ ಹೂಡಿಕೆಗಳನ್ನು ಅದೇ ಡಿಮ್ಯಾಟ್ ಖಾತೆಯಲ್ಲಿ ಇಟ್ಟುಕೊಂಡಿರಬಹುದು. ಡಿಮ್ಯಾಟ್ ಖಾತೆಯಲ್ಲಿ ಮ್ಯುಚುವಲ್ ಫಂಡ್ ಯುನಿಟ್ ಗಳನ್ನು ಇಟ್ಟುಕೊಂಡರೆ ಕೆಲಸಗಳು ನಿಮಗಾಗಿ ಬಹಳ ಸುಲಭವಾಗಿರುತ್ತವೆ. ನಿಮ್ಮ ಪೋರ್ಟ್ಫೋಲಿಯೊವನ್ನು ಒಂದೆ ಸ್ಥಳದಿಂದ ಅಂದರೆ ಎನ್ಎಸ್ಡಿಎಲ್ ಸಿಎಎಸ್ ಮೂಲಕ ನಿಗಾವಹಿಸುವುದು ಮಾತ್ರವಲ್ಲದೆ, ಒಂದೊಮ್ಮೆ ನಿಮ್ಮ ವಯಕ್ತಿಕ ಮಾಹಿತಿಯಲ್ಲಿ ಯಾವುದೇ ಬದಲಾವಣೆ ಮಾಡಬೇಕಾದ ಪಕ್ಷದಲ್ಲಿ ವಿವಿಧ ಮ್ಯುಚುವಲ್ ಫಂಡ್ ಸಂಸ್ಥೆಗಳಲ್ಲಿ ಬದಲಾಯಿಸಬೇಕಾದ ಕಷ್ಟದಿಂದ ಮುಕ್ತಿ ನೀಡುತ್ತದೆ, ಉದಾಹರಣೆಗೆ, ವಿಳಾಸ, ಬ್ಯಾಂಕ್ ವಿವರಗಳು ಅಥವಾ ನಾಮಿನಿ ಇತ್ಯಾದಿಗಳು, ನೀವು ಅರ್ಜಿ ನಮೂನೆಯಲ್ಲಿರುವ ನಿಮ್ಮ ಡಿಪಿ ಐಡಿ ಮತ್ತು ಕ್ಲೈಂಡ್ ಐಡಿಅನ್ನು ಸುಮ್ಮನೆ ಸೂಚಿಸುವ ಮೂಲಕ ಡಿಮ್ಯಾಟ್ ನಮೂನೆಯಲ್ಲಿ ಮ್ಯುಚುವಲ್ ಫಂಡಿಗೆ ಚಂದಾದಾರರಾಗಬಹುದು. ಡಿಮ್ಯಾಟ್ ಖಾತೆಯ ಮುಖಾಂತರ ಸಿಪ್ಪ ಮಾರ್ಗವಾಗಿ ಮ್ಯುಚುವಲ್ ಫಂಡಿನಲ್ಲಿ ಹೂಡಿಕೆ ಮಾಡುವುದು ಸಹ ಸಾಧ್ಯವಾಗುತ್ತದೆ. ಮ್ಯುಚುವಲ್ ಫಂದ್ ಯುನಿಟ್ಗಳ ಬಿಡುಗಡೆ ಮೊತ್ತ ಅಥವಾ ಮರುಖರೀದಿಗಾಗಿ, ನೀವು ನಿಮ್ಮ ಡಿಪಿಗೆ ಸೂಚನೆಗಳನ್ನು ನೀಡಬಹುದು ಅಥವಾ ಎನ್ಎಸ್ಡಿಎಲ್'ನ ತ್ವರಿತ-ಇ ಸೌಲಭ್ಯಗಳನ್ನು ಸಹ ಬಳಸಬಹುದು.

VI. ನೀವು ನಿಮ್ಮ ಡಿಮ್ಯಾಟ್ ಖಾತೆಯ ಮೂಲಕ ಕಂಪನಿಗೆ ನಿಮ್ಮ ಷೇರುಗಳನ್ನು ನೀಡುವ ಮೂಲಕ ಬೈಬ್ಯಾಕ್ ಕೊಡುಗೆಯಲ್ಲಿ ಭಾಗವಹಿಸಬಹುದು.

VII. ಡಿಮ್ಯಾಟ್ ಖಾತೆಯನ್ನು ನಿರ್ವಹಿಸಲು, ನೀವು ನಿಮ್ಮ ಡಿಪಿಗೆ ಸೂಚಿಸಿದ ನಮೂನೆಯಲ್ಲಿ ಸೂಚನೆಗಳನ್ನು ನೀಡಬೇಕು. ಪರ್ಯಾಯವಾಗಿ, ನೀವು ಎನ್ಎಸ್ಡಿಎಲ್'ನ ತ್ವರಿತ-ಇ ಸೇವೆಗಳನ್ನು ಉಪಯೋಗಿಸಿ ನಿಮ್ಮ ಡಿಪಿಗೆ ಎಲ್ಲಿಂದಲಾದರೂ, ಯಾವಾಗಲಾದರೂ, ವಿದ್ಯುನ್ಮಾನವಾಗಿ ಸೂಚನೆ ನೀಡಬಹುದು.

**ಡಿಮ್ಯಾಟ್ ಗಾಗಿ ಭೌತಿಕ ಭದ್ರತೆಗಳು ಲಭ್ಯವಿದೆಯೇ ಎಂದ ಪತ್ತೆ ಮಾಡಲು**
**https://nsdl.co.in/master_search.php ಇಲ್ಲಿಗೆ ಭೇಟಿ ಮಾಡಿ**

## ಬಿ. ಎನ್‌ಎಸ್ಡಿಎಲ್ ಡಿಮ್ಯಾಟ್ ಖಾತೆಯ ಕೊಡುಗೆಗಳು

### ೧) ಎನ್‌ಎಸ್ಡಿಎಲ್ ತ್ವರಿತ-ಇ ಸೇವೆ



ತ್ವರಿತ-ಇ (ಸ್ಪಿಡಿ ಎಂದು ಉಚ್ಚರಿಸಲಾಗುತ್ತದೆ) ಅಂದರೆ ಎನ್‌ಎಸ್ಡಿಎಲ್ ನಿಂದ ಒದಗಿಸಲಾದ ಅಂತರ್ಜಾಲ ಆಧಾರಿತ ಸೌಲಭ್ಯವಾಗಿದೆ. ಇದು ಡಿಮ್ಯಾಟ್ ಖಾತೆದಾರರಿಗೆ ಡೆಲಿವರಿ ನೀಡಲು, ಅಡಮಾನ ಮಾಡಲು ಮತ್ತು ವಿದ್ಯುನ್ಮಾನ ರೂಪದಲ್ಲಿ ಮ್ಯುಚುವಲ್ ಫಂಡ್ ಬಿಡುಗಡೆ ಮೊತ್ತಕ್ಕೆ ಸಂಬಂಧಿಸಿದ ಸೂಚನೆಗಳನ್ನು ನೀಡಲು ಸಹಾಯ ಮಾಡುತ್ತದೆ, ಹಾಗಾಗಿ ಪ್ರಕ್ರಿಯೆಗಳು ವೇಗವಾಗಿ, ಸುಭದ್ರವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯುತ್ತವೆ. ಒಂದೊಮ್ಮೆ ತಮ್ಮ ಡಿಪಿಯು ಈ ಸೇವೆಯನ್ನು ಒದಗಿಸಿದ್ದರೆ ಡಿಮ್ಯಾಟ್ ಖಾತೆದಾರರು ಈ ಸೇವೆಯನ್ನು ಬಳಸಬಹುದು.

ಹೆಚ್ಚಿನ ಮಾಹಿತಿಗಾಗಿ, ದಯಮಾಡಿ https://eservices.nsdl.com/ ಗೆ ಭೇಟಿ ಮಾಡಿ

### ೨) ಎನ್‌ಎಸ್ಡಿಎಲ್ ಮೊಬೈಲ್ ಆಪ್ ಮತ್ತು ಐಡಿಇಎಎಸ್ ಸೇವೆಗಳು



ಎನ್‌ಎಸ್ಡಿಎಲ್ ತನ್ನ ಹೂಡಿಕೆದಾರರಿಗಾಗಿ ಒಂದು ಮೊಬೈಲ್ ಆಪ್ ಅನ್ನು ಅಭಿವೃದ್ಧಿಪಡಿಸಿದೆ. ನೀವು ಅದನ್ನು ಡೌನ್ಲೋಡ್ ಮಾಡಿಕೊಳ್ಳಬಹುದು ಮತ್ತು ಎನ್‌ಎಸ್ಡಿಎಲ್ ಮೊಬೈಲ್ ಆಪ್ ಅನ್ನು ಬಳಸಿಕೊಂಡು ಬ್ಯಾಲೆನ್ಸ್ ಅನ್ನು ವೀಕ್ಷಿಸಬಹುದು ಮತ್ತು ನಿಮ್ಮ ಮೊಬೈಲ್ ಮೂಲಕ ಯಾವುದೇ ಸಮಯದಲ್ಲಿ ಎಲ್ಲಿಂದಲಾದರೂ ನಿಮ್ಮ ಡಿಮ್ಯಾಟ್ ಖಾತೆಯಲ್ಲಿನ ಇ-ವೋಟಿಂಗ್ ನಲ್ಲಿ ಭಾಗವಹಿಸಬಹುದು. ಇದು ಗೂಗಲ್ ಪ್ಲೇ ಸ್ಟೋರ್ ಮತ್ತು ಆಪ್ ಸ್ಟೋರ್ ನಲ್ಲಿ ಲಭ್ಯವಿದೆ ಹಾಗೂ ಇದು ಸಂಪೂರ್ಣವಾಗಿ ಉಚಿತವಾಗಿ ದೊರೆಯುತ್ತದೆ.

### ೩) ಎನ್‌ಎಸ್ಡಿಎಲ್ ಇ-ವೋಟಿಂಗ್ ಸೇವೆ



ಎನ್‌ಎಸ್ಡಿಎಲ್ ವಿದ್ಯುನ್ಮಾನ ವೋಟಿಂಗ್ (ಇ-ವೋಟಿಂಗ್) ಪ್ರತಿಯೊಬ್ಬ ಷೇರುದಾರರಿಗೆ ಸಭೆ ನಡೆಯುವ ಸ್ಥಳಕ್ಕೆ ಭೌತಿಕವಾಗಿ ಹಾಜರಾಗುವ ಅಗತ್ಯವಿಲ್ಲದೆ ಅನ್ಲೈನ್ ಮೂಲಕ ವೋಟಿಂಗ್ ಹಕ್ಕುಗಳನ್ನು ಚಲಾಯಿಸಲು ಅನುವು ಮಾಡಿಕೊಡುತ್ತದೆ. ಇ-ವೋಟಿಂಗ್ ಸೇವೆಯು ತ್ವರಿತ-ಇ ಹಾಗೆಯೇ ಎನ್‌ಎಸ್ಡಿಎಲ್ ಮೊಬೈಲ್ ಆಪ್ ನಲ್ಲಿಯೂ ಸಹ ಅಳವಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದಯಮಾಡಿ, https://www.evoting.nsdl.com/ ಗೆ ಭೇಟಿ ಮಾಡಿ

IndiaBondInfo
ಏಕ ಸ್ಥಳದಲ್ಲಿ, ವಿವಿಧ ಬಾಂಡುಗಳು ಮತ್ತು ಡಿಬೆಂಚರ್ಸ್‌ಗಳ ಮಾಹಿತಿ https://www.indiabondinfo.nsdl.com ಗೆ ಭೇಟಿ ನೀಡಿ

## ಳ) ಎನ್ಎಸ್ಡಿಎಲ್ ಕ್ರೋಡೀಕೃತ ಖಾತೆ ಹೇಳಿಕೆ (ಸಿಎಎಸ್)

I. ಎನ್ಎಸ್ಡಿಎಲ್ ಪ್ರತಿ ಡಿಮ್ಯಾಟ್ ಖಾತೆದಾರರಿಗೆ ಅವರ ಎಲ್ಲಾ ಡಿಮ್ಯಾಟ್ ಖಾತೆ(ಗಳು) ಮತ್ತು ಮ್ಯುಚುವಲ್ ಫಂಡ್ ಹೂಡಿಕೆಗಳಿಗಾಗಿ ಖಾತೆಯ ಹೇಳಿಕೆ ರೂಪದಲ್ಲಿ ಒಂದು ಕ್ರೋಡೀಕೃತ ಖಾತೆ ಹೇಳಿಕೆ (ಸಿಎಎಸ್) ಕಳುಹಿಸುತ್ತದೆ. ಹಿಡುವಳಿಗಳನ್ನು ಮೊದಲ ಖಾತೆದಾರರ ಪ್ಯಾನ್ ಅಧಾರದ ಮೇಲೆ ಒಟ್ಟುಗೂಡಿಸಲಾಗಿರುತ್ತದೆ.

II. ಈ ಹೇಳಿಕೆಯನ್ನು ಮಾಸದ ಅವಧಿಯಲ್ಲಿ ಖಾತೆಯ ವಹಿವಾಟುಗಳು ಇದ್ದರೆ ಪ್ರತಿ ತಿಂಗಳು ಸಹ ಕಳುಹಿಸಲಾಗುತ್ತದೆ. ಒಂದೊಮ್ಮೆ ನೀವು ನಿಮ್ಮ ಇಮೇಲ್ ಐಡಿ ಮತ್ತು ಸಮ್ಮತಿಯನ್ನು ನಿಮ್ಮ ಡಿಪಿಗೆ ಒದಗಿಸಿದ್ದರೆ, ಹೇಳಿಕೆಯನ್ನು ಇಮೇಲ್ ಮೂಲಕ ಕಳುಹಿಸಲಾಗುವುದು.

III. ನಿಮ್ಮ ಡಿಮ್ಯಾಟ್ ಖಾತೆಗಳು ಮತ್ತು ಮ್ಯುಚುವಲ್ ಫಂಡ್ ಫೋಲಿಯೊನಲ್ಲಿರುವ ನಿಮ್ಮ ಪ್ರತಿಯೊಂದು ಹೂಡಿಕೆಗಾಗಿ ಹೇಳಿಕೆ ಅವಧಿ ಮತ್ತು ಕ್ಲೋಸಿಂಗ್ ಬ್ಯಾಲೆನ್ಸ್ ಪರೀಕ್ಷಿಸಿ.

IV. ಹೇಳಿಕೆಯು ಅಂತೆಯೇ ನಿಮ್ಮ ಪ್ರತಿಯೊಂದು ಹೂಡಿಕೆಯ ದರ, ಒಟ್ಟುಗೂಡಿಸಿದ ಪೋರ್ಟ್ಫೋಲಿಯೊ ಮೌಲ್ಯ ಮತ್ತು ಕಾಲಕ್ರಮೇಣ ಒಟ್ಟು ಪೋರ್ಟ್ಫೋಲಿಯೊ ಮೌಲ್ಯದಲ್ಲಿ ಆದ ಬದಲಾವಣೆ ತೋರಿಸುವ ಗ್ರಾಫ್ ಅನ್ನು ತೋರಿಸುತ್ತದೆ.

V. ಅದು ಹಾಗೆಯೇ ಇತರೆ ವಿವರಗಳನ್ನು ತೋರಿಸುತ್ತದೆ ಅವುಗಳೆಂದರೆ ನಿಮ್ಮ ಕೆವೈಸಿ, ಇಮೇಲ್ ಐಡಿ ಮತ್ತು ನಿಮ್ಮ ಎಂಎಫ್ ಫೋಲಿಯೋ ನಲ್ಲಿ ಸೂಚಿಸಲಾದ ಮೊಬೈಲ್ ಸಂಖ್ಯೆ ಇತ್ಯಾದಿಯು ಉನ್ನತೀಕರಿಸಲಾಗಿದೆಯೇ, ಒಂದೊಮ್ಮೆ ನೀವು ಯಾವುದೇ ವ್ಯತ್ಯಾಸವನ್ನು ಗಮನಿಸಿದರೆ ಅಥವಾ ಉನ್ನತೀಕರಿಸುವ ಅಗತ್ಯವಿದ್ದರೆ, ನೀವು ಮ್ಯುಚುವಲ್ ಫಂಡ್ ಕಂಪನಿ ಅಥವಾ ಅದರ ರಿಜಿಸ್ಟ್ರಾರ್ ಅನ್ನು ಸಂಪರ್ಕಿಸಬಹುದು.

VI. ಒಂದುವೇಳೆ ಹೇಳಿಕೆ ಸ್ವೀಕರಿಸದಿದ್ದರೆ ಅಥವಾ ಒಂದೊಮ್ಮೆ ಹೇಳಿಕೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದರೆ, ದಯಮಾಡಿ ತಕ್ಷಣವೇ ನಿಮ್ಮ ಡಿಪಿ ಅನ್ನು ಸಂಪರ್ಕಿಸಿ.

VII. ಎನ್ಎಸ್ಡಿಎಲ್ ಡಿಮ್ಯಾಟ್ ಖಾತೆದಾರರನ್ನು ಸಕ್ರಿಯಗೊಳಿಸಲು ಎನ್ಎಸ್ಡಿಎಲ್ ಗೆ ನೇರವಾಗಿ ಇಮೇಲ್ ಐಡಿ ಒದಗಿಸಲು ಎನ್ಎಸ್ಡಿಎಲ್ ನಿಂದ ಇಮೇಲ್ ಮೂಲಕ (ಇ-ಸಿಎಎಸ್) ಸಿಎಎಸ್ ಸ್ವೀಕರಿಸಲು ಎನ್ಎಸ್ಡಿಎಲ್ ಒಂದು ಆನ್ಲೈನ್ ಸೌಲಭ್ಯವನ್ನು ಅಭಿವೃದ್ಧಿ ಪಡಿಸಿದೆ https://nsdlcas.nsdl.com/



NSDL
Technology, Trust & Reach

## ಸಿ. ಒಬ್ಬ ಜಾಗರೂಕ ಹೂಡಿಕೆದಾರರಾಗಿ

1) ನೀವೊಬ್ಬ ಜಾಗರೂಕ ಹೂಡಿಕೆದಾರರೇ ಎಂದು ಖಚಿತಪಡಿಸಿಕೊಳ್ಳಿ. ಒಬ್ಬ ಜಾಗರೂಕ ಹೂಡಿಕೆದಾರ ಎಂದರೆ...

- ಯಾವಾಗಲು ಸೆಬಿ ನೋಂದಾಯಿತ ಸ್ಟಾಕ್ ಬ್ರೋಕರ್ ಅಥವಾ ಅಧಿಕೃತ ವ್ಯಕ್ತಿಗಳ ಜೊತೆಯಲ್ಲಿಯೇ ಕ್ಯಾಪಿಟಲ್ ಮಾರುಕಟ್ಟೆಯಲ್ಲಿ ಯಾವುದೇ ಹೂಡಿಕೆ ಮಾಡುವವರು.
- ಸಹಿ ಮಾಡುವ ಮುನ್ನ ಎಲ್ಲಾ ದಸ್ತಾವೇಜುಗಳನ್ನು ಎಚ್ಚರಿಕೆಯಿಂದ ಓದುತ್ತಾರೆ.
- ಸಹಿ ಮಾಡಿ ದಸ್ತಾವೇಜುಗಳನ್ನು, ಖಾತೆಯ ಹೇಳಿಕೆಗಳನ್ನು, ಸ್ವೀಕರಿಸಿದ ಒಪ್ಪಂದ ಟಿಪ್ಪಣಿಗಳನ್ನು ಮತ್ತು ಮಾಡಿದ ಪಾವತಿಗಳ ದಾಖಲೆ ಇಟ್ಟುಕೊಳ್ಳುತ್ತಾರೆ.
- ಕಾಲಾನುಕಾಲಕ್ಕೆ ತನ್ನ ಆರ್ಥಿಕ ಗುರಿಗಳನ್ನು ಮತ್ತು ಪೋರ್ಟ್ಪೋಲಿಯೊ ಅನ್ನು ವಿಮರ್ಶಿಸುತ್ತಿರುತ್ತಾರೆ.
- ಪರಿಣಾಮಕಾರಿ ಮೇಲ್ವಿಚಾರಣೆಗಾಗಿ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿ ನೊಂದಾಯಿಸಿಕೊಳ್ಳುತ್ತಾರೆ ಮತ್ತು ಎನ್ಎಸ್ಡಿಎಲ್ ಒದಗಿಸುವ ಸೌಲಭ್ಯಗಳಾದ ಮೊಬೈಲ್ ಆಪ್, ಎನ್ಎಸ್ಡಿಎಲ್ ಇ-ಸಿಎಎಸ್, ಐಡಿಇಎಎಸ್ ಅನ್ನು ಬಳಸುತ್ತಾರೆ.
- ಮ್ಯುಚುವಲ್ ಫಂಡ್ ಸಂಬಂಧಿತ ಯಾವುದೇ ಸೇವೆಗಳಿಗಾಗಿ ಯಾವಾಗಲು ಎಎಂಎಫ್ಐ ನೋಂದಾಯಿತ ಮ್ಯುಚುವಲ್ ಫಂಡ್ ವಿತರಕರ ಜೊತೆಯಲ್ಲಿ ವ್ಯವಹರಿಸುತ್ತಾರೆ.
- ಯಾವಾಗಲು ಬ್ಯಾಂಕಿಂಗ್ ಚಾನೆಲ್ ಬಳಸಿಕೊಂದು ಹೂಡಿಕೆ ಮಾಡುತ್ತಾರೆ, ಅಂದರೆ ಯಾವುದೇ ನಗದು ವ್ಯವಹಾರಗಳಿಲ್ಲ.

## ೨) ಡಿಮ್ಯಾಟ್ ಖಾತೆಯ ಕಾಳಜಿ ವಹಿಸುವುದು

ನೀವು ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಮೌಲ್ಯಯುತ ಹೂಡಿಕೆಗಳನ್ನು ಇಟ್ಟುಕೊಂಡಿರುತ್ತೀರಿ. ಕೆಲವು ಮೂಲ ವಿಚಾರಗಳ ಬಗ್ಗೆ ಕಾಳಜಿ ವಹಿಸುವುದು ಬಹಳ ಮುಖ್ಯ, ಅವುಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ, ನೀವು ಎನ್‌ಎಸ್ಡಿಎಲ್ ಡಿಮ್ಯಾಟ್ ಖಾತೆಯ ವಿವಿಧ ವಿಶೇಷತೆಗಳನ್ನು ಆನಂದಿಸುತ ್ತಿರುವಾಗಲೇ ನಿಮ್ಮ ಹೂಡಿಕೆಗಳು ಸುರಕ್ಷಿತವಾಗಿವೆ ಎಂದು ಖಾತರಿಪಡಿಸಿಕೊಳ್ಳುವುದು ಒಳ್ಳೆಯದು.

I. ನಿಮ್ಮ ವಯಕ್ತಿಕ ಮಾಹಿತಿಯಲ್ಲಿ ಅಗುವ ಯಾವುದೇ ಬದಲಾವಣೆಯನ್ನು ಕೂಡಲೇ ನಿಮ್ಮ ಡಿಪಿಗೆ ಸೂಚಿಸಿ (ಉದಾಹರಣೆಗೆ ವಿಳಾಸ) ಅಥವಾ ನಿಮ್ಮ ಡಿಮ್ಯಾಟ್ ಖಾತೆಗೆ ಲಿಂಕ್ ಮಾಡಲಾದ ಬ್ಯಾಂಕ್ ಖಾತೆಯ ವಿವರಗಳು ಸೂಚಿತ ಮಾದರಿಯಲ್ಲಿವೆಯೇ ಹಾಗು ಸಿಸ್ಟಂನಲ್ಲಿ ಉನ್ನತೀಕರಣದ ದೃಡೀಕರಣ ಸ್ವೀಕರಿಸಿ.

II. ನಿಮ್ಮ ಡಿಮ್ಯಾಟ್ ಖಾತೆಗೆ ನಾಮಿನಿ ಸೌಲಭ್ಯ ಪಡೆದುಕೊಳ್ಳಿ. ಇದು ಖಾತೆದಾರರ ಮರಣದ ಸಮಯದಲ್ಲಿ ಷೇರುಗಳ ವರ್ಗಾವಣೆಯ ಪ್ರಕ್ರಿಯೆಯನ್ನು ಸರಳಗೊಳಿಸುತ್ತದೆ. ನೀವು ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ೩ ನಾಮಿನಿಗಳ ವರೆಗು ಸೂಚಿಸುವ ಅವಕಾಶವಿದೆ. ಯಾವುದೇ ಸಮಯದಲ್ಲಿ ನಾಮಿನಿ (ಗಳ) ಹೆಸರುಗಳನ್ನು ಬದಲಾಯಿಸಬಹುದು.

III. ನಿಮ್ಮ ಡಿಮ್ಯಾಟ್ ಖಾತೆಯನ್ನು ನಿರ್ವಹಿಸಲು ಯಾರಿಗಾದರು ವಕಾಲತ್ತುನಾಮೆ ನೀಡುವ ಮೊದಲು, ಅಂಗೀಕರಿಸುತ್ತಿರುವ ಅಧಿಕಾರಗಳ ವ್ಯಾಪ್ತಿ ಮತ್ತು ಪರಿಣಾಮಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ.

IV. ನಿಮ್ಮ ಡಿಪಿ ಇಂದ ಮಾತ್ರವೇ ಡೆಲಿವರಿ ಸೂಚನೆ ಸ್ಲಿಪ್ (ಡಿಐಎಸ್) ಅನ್ನು ಸ್ವೀಕರಿಸಿ ಒಂದೊಮ್ಮೆ ಪ್ರತಿ ಸ್ಲಿಪ್ ಅನ್ನು ನಿಮ್ಮ ಕ್ಲೈಂಟ್ ಐಡಿ ಇರುವ ಸೀರಿಯಲ್ ನಂಬರ್ ನೊಂದಿಗೆ ಪ್ರಿ-ಪ್ರಿಂಟ್ ಮಾಡಿದ್ದರೆ ಅದನ್ನು ಸುರಕ್ಷಿತ ಅನುಪಾಲನೆಯಲ್ಲಿ ಇರಿಸಿ. ಎಂದಿಗೂ ಸಹ ಯಾವುದೇ ಖಾಲಿ ನಮೂನೆ ಅಥವಾ ಡಿಐಎಸ್ ಗೆ ಸಹಿ ಮಾಡಬೇಡಿ. ನಮೂನೆಯಲ್ಲಿ ಸಂಪೂರ್ಣವಾಗಿ ತುಂಬಿದ ನಂತರವೇ ಸಹಿ ಮಾಡಬೇಕೆಂದು ನೆನಪಿರಲಿ.

V. ಎನ್‌ಎಸ್ಡಿಎಲ್ ನಿಂದ ನೇರವಾಗಿ ಎಸ್‌ಎಂಎಸ್ ಅಲರ್ಟ್ ಮತ್ತು ನಿಯಮಿತ ಅಪ್ಡೇಟ್ಗಳನ್ನು ಸ್ವೀಕರಿಸಲು ಖಾತೆ ತೆರೆಯುವ ನಮೂನೆಯಲ್ಲಿ ನಿಮ್ಮ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿ ಬರೆಯಿರಿ. ಈ ಸೌಲಭ್ಯವು ನಿಮಗಾಗಿ ಸಂಪೂರ್ಣ ಉಚಿತವಾಗಿರುತ್ತದೆ. ಒಮ್ಮೊಮ್ಮೆ ನಿಮ್ಮ ಮೊಬೈಲ್ ಸಂಖ್ಯೆ ಅಥವಾ ಇಮೇಲ್ ಐಡಿ ಬದಲಾದರೆ, ಕೂಡಲೆ ನಿಮ್ಮ ಡಿಪಿಗೆ ಸೂಚಿತ ಮಾರ್ಗದಲ್ಲಿ ಸೂಚಿಸಿ ಹಾಗೂ ಸಿಸ್ಟಂನಲ್ಲಿ ಉನ್ನತೀಕರಣದ ದೃಡೀಕರಣ ಸ್ವೀಕರಿಸಿ. ಹಾಗಾಗಿ ಎನ್‌ಎಸ್ಡಿಎಲ್ ನಿಂದ ನಿಮಗೆ ಅಲರ್ಟ್ಗಳು ಬರುವುದು ಮುಂದುವರಿಯುತ್ತದೆ.

VI. ಎನ್‌ಎಸ್ಡಿಎಲ್ ನಿಂದ ನೇರವಾಗಿ ಇಮೇಲ್ ಮೂಲಕ ನಿಮ್ಮ ಎಲ್ಲಾ ಹೂಡಿಕೆಗಳ ಕ್ರೂಡೀಕೃತ ಹೇಳಿಕೆಯನ್ನು ಪಡೆಯಲು ಎನ್‌ಎಸ್ಡಿಎಲ್ ಇ-ಸಿಎಎಸ್ ಗೆ ಚಂದಾದಾರರಾಗಿ ಇಲ್ಲಿ https://nsdlcas.nsdl.com/

VII. ಎನ್‌ಎಸ್ಡಿಎಲ್ ನ ವಿವಿಧ ಉತ್ಪನ್ನಗಳು / ಸೇವೆಗಳ ಬಗ್ಗೆ ಮತ್ತು ಠೇವಣಿ ವ್ಯವಸ್ಥೆಯ ಇತರೆ ಪ್ರಮುಖ ವಿಶೇಷತೆಗಳ ಬಗ್ಗೆ ನಿಮಗೆ ಸೂಚನೆ ನೀಡಲು ಎನ್‌ಎಸ್ಡಿಎಲ್ ಮಾಸಿಕವಾಗಿ ವಾರ್ತಪತ್ರವನ್ನು ಪ್ರಕಟಿಸುತ್ತದೆ "ದಿ ಫೈನಾನ್ಶಿಯಲ್ ಕಲೆಡೊಸ್ಕೋಪ್".




ದಯಮಾಡಿ ನಿಮ್ಮ ಇಮೇಲ್ ಐಡಿಯನ್ನು ಒದಗಿಸುವ ಮೂಲಕ ಈಗಲೇ ಚಂದಾದಾರರಾಗಿ https://nsdl.co.in/e-newsletter.php

ಈ ವಾರ್ತಾಪತ್ರಕ್ಕೆ ಮುನ್ನ ವಿತರಣೆಯಾದ ಎಲ್ಲಾ ಪ್ರತಿಗಳನ್ನು ನಿಮ್ಮ ಅವಗಾಹನೆಗಾಗಿ ಲಭ್ಯವಿರುವಂತೆ ಮಾಡಲಾಗಿದೆ https://nsdl.co.in/publications/nest.php

NSDL
Technology, Trust & Reach

# ಡಿ. ಹೆಚಿನ ಮಾಹಿತಿ

## 1. ಸ್ವೀಕರಿಸದ ಲಾಭಾಂಶ / ಷೇರುಗಳಿಗಾಗಿ ಐಇಪಿಎಫ್ ನಿಂದ ಹಿಂಪಾವತಿ ಕ್ಲೇಮ್ ಮಾಡುವುದು

ಯಾವುದೇ ಕಾರಣದಿಂದ ನಿರಂತರ ಏಳು ಸತತ ವರ್ಷಗಳು ಕ್ಲೇಮ್ ಮಾಡದ ಅಥವಾ ಪಾವತಿ ಮಾಡದೆ ಉಳಿದಂತಹ ಎಲ್ಲಾ ಲಾಭಾಂಶಗಳು ಮತ್ತು ಶೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣೆ ನಿಧಿ (ಐಇಪಿಎಫ್) ಪ್ರಾದಿಕಾರಕ್ಕೆ ಆಯಾ ಕಂಪನಿಗಳು ವರ್ಗಾಯಿಸುತ್ತವೆ. ಐಇಪಿಎಫ್ ಪ್ರಾಧಿಕಾರವು ಒಂದು ಶಾಸನಬದ್ಧ ಸಂಸ್ಥೆಯಾಗಿದ್ದು, ಇದನ್ನು ಕಂಪನಿಗಳ ಕಾಯ್ದೆ, 2013ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಪಾವತಿಯಾಗದ ಲಾಭಾಂಶ ಮತ್ತು/ ಅಥವಾ ಕ್ಲೇಮ್ ಮಾಡದ ಷೇರುಗಳನ್ನು ಸ್ವೀಕರಿಸಲು ಹೂಡಿಕೆದಾರರು ಅಥವಾ ಆತನ / ಆಕೆಯ ಅಧಿಕೃತ ಪ್ರತಿನಿಧಿಗಳು ಐಇಪಿಎಫ್ ಪ್ರಧಿಕಾರಕ್ಕೆ ಕ್ಲೇಮ್ ಅನ್ನು ಸಲ್ಲಿಸುವ ಅಗತ್ಯವಿರುತ್ತದೆ. ಕ್ಲೇಮುದಾರರು ಐಇಪಿಎಫ್ - 5 ನಮೂನೆಯನ್ನು ಡೌನ್ಲೋಡ್ ಮಾಡಿಕೊಂಡು, ಅದನ್ನು ತುಂಬಿಸಿ ಐಇಪಿಎಫ್ ಪ್ರಾಧಿಕಾರಕ್ಕೆ ಆನ್ಲೈನ್ ಮೂಲಕ ಅಪ್ಲೋಡ್ ಮಾಡಬೇಕು. ಹಾಗೆಯೇ ಕ್ಲೇಮ್ ನಮೂನೆ ಮತ್ತು ದೃಡೀಕರಣ ಆನ್ಲೈನ್ ನಲ್ಲಿ ರಚನೆಯಾಗುತ್ತದೆ ಅದನ್ನು ಪ್ರಿಂಟ್ ಮಾಡಿಕೊಳ್ಳಬೇಕು, ಹಾಗೂ ಅದನ್ನು ಅಗತ್ಯವಿರುವ ಸಹಕಾರಿ ದಸ್ತಾವೇಜುಗಳ ಜೊತೆಯಲ್ಲಿ, ಭೌತಿಕ ನಮೂನೆಯಲ್ಲಿ ಆಯಾ ಕಂಪನಿಯಿಂದ ನೇಮಿಸಿದ ನೋಡಲ್ ಅಧಿಕಾರಿಗೆ ಸಲ್ಲಿಸಬೇಕು. ಕ್ಲೇಮಿನ ಪರಿಶೀಲನೆ ನಂತರ, ಕಂಪನಿಯು ಐಇಪಿಎಫ್ ಪ್ರಾಧಿಕಾರಕ್ಕೆ ದೃಡೀಕರಣ ಕಳುಹಿಸುತ್ತದೆ ಆನಂತರ ವಿದ್ಯುನ್ಮಾನ ವರ್ಗಾವಣೆ ಮೂಲಕ ಆತನ / ಆಕೆಯ ಬ್ಯಾಂಕ್ ಖಾತೆಯಲ್ಲಿ ಕ್ಲೇಮುದಾರರಿಗೆ ರಿಫಂಡ್ ಅನ್ನು ಒದಗಿಸಲಾಗುತ್ತದೆ. ಒಂದೊಮ್ಮೆ ಕ್ಲೇಮು ಷೇರುಗಳಿಗಾದರೆ, ಅವುಗಳನ್ನು ಕ್ಲೇಮು ನಮೂನೆಯಲ್ಲಿ ಸೂಚಿಸಲಾದ ಹೂಡಿಕೆದಾರರ ಡಿಮ್ಯಾಟ್ ಖಾತೆಗೆ ಜಮೆ ಮಾಡಲಾಗುತ್ತದೆ. ಒಬ್ಬ ಅರ್ಜಿದಾರನು ಒಂದು ಹಣಕಾಸಿನ ವರ್ಷದಲ್ಲಿ ಪ್ರತಿ ಕಂಪನಿಗಾಗಿ ಒಂದು ಕ್ಲೇಮ್ ಮಾತ್ರ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ, ದಯಮಾಡಿ http://www.iepf.gov.in/ ಗೆ ಭೇಟಿ ನೀಡಿ. ಎಲ್ಲಾ ಕಂಪನಿಗಳು ತಮ್ಮ ವೆಬ್ಸೈಟಿನಲ್ಲಿ ಕ್ಲೇಮ್ ಮಾಡದ ಷೇರುಗಳು ಮತ್ತು ಲಾಭಾಂಶಗಳ ವಿವರಗಳನ್ನು ಪ್ರಕಟಿಸುವುದು ಅಗತ್ಯವಾದ ವಿಚಾರವೆಂದು ತಿಳಿಯುವುದು ಬಹಳ ಮುಖ್ಯ.

## ೨. ಭದ್ರತೆಗಳ ವರ್ಗಾವಣೆಗೆ ಡಿಮ್ಯಾಟ್ ಕಡ್ಡಾಯ

ಎಪ್ರಿಲ್ ೧, ೨೦೧೯ ರಿಂದ ಜಾರಿಗೆ ಬರುವಂತೆ ಪಟ್ಟಿ ಮಾಡಿದ ಕಂಪನಿಗಳ ಯಾವುದೇ ಭದ್ರತೆಗಳ ವರ್ಗಾವಣೆಗಳನ್ನು ಡಿಮ್ಯಾಟ್ ಮಾದರಿಯಲ್ಲಿ ಮಾತ್ರ ಮಾಡಬೇಕು ಎಂದು ಸೆಬಿ ಕಡ್ಡಾಯ ಮಾಡಿರುತ್ತದೆ. ಇತರೆ ವಾಕ್ಯದಲ್ಲಿ ಹೇಳುವುದಾದರೆ, ಒಂದೊಮ್ಮೆ ನೀವು ಬೌತಿಕ ರೂಪದಲ್ಲಿ ಪಟ್ಟಿ ಮಾಡಿದ ಕಂಪನಿಯ ಷೇರುಗಳನ್ನು ಹೊಂದಿದ್ದರೆ ಮತ್ತು ಅದನ್ನು ಬೇರೊಬ್ಬರಿಗೆ ವರ್ಗಾಯಿಸಬೇಕಾದರೆ, ಏಪ್ರಿಲ್ ೧, ೨೦೧೯ ರಿಂದ ಜಾರಿಗೆ ಬಂದಂತೆ, ಅವರನ್ನು ನೀವು ಡಿಮ್ಯಾಟ್ ಮಾದರಿಗೆ ಪರಿವರ್ತಿಸಿದ ನಂತರವೇ ವರ್ಗಾವಣೆ ಮಾಡಬಹುದು. ಈ ದಿನಾಂಕದಿಂದ ಪ್ರಸರಣ (ಅಂದರೆ ಷೇರುದಾರರ ಮರಣದ ಪಕ್ಷದಲ್ಲಿ ಷೇರುಗಳ ವರ್ಗಾವಣೆ) ಮತ್ತು ಮಾರ್ಪಾಡು (ಅಂದರೆ ಷೇರುದಾರರ ಹೆಸರಿನ ಅನುಕ್ರಮದಲ್ಲಿ ಬದಲಾವಣೆ) ಗಳನ್ನು ಭೌತಿಕ ಮಾದರಿಯಲ್ಲಿರುವ ಷೇರು ಇತ್ಯಾದಿಗಳಿಗೆ ಮಾತ್ರ ಅನುಮತಿಸಲಾಗುತ್ತದೆ. ಹಾಗಾಗಿ ಫಲಾನುಭವಿಗಳು ಡಿಮ್ಯಾಟ್ ಖಾತೆ ತೆರೆಯಬೇಕು ಹಾಗೂ ನಿಮ್ಮ ಷೇರುಗಳನ್ನು ಸಾಧ್ಯವಾದಷ್ಟು ಬೇಗನೇ ಡಿಮ್ಯಾಟಿಗೆ ಪರಿವರ್ತಿಸಿಕೊಳ್ಳಿ.

### ೩. ಪಟ್ಟಿಮಾಡದ ಸಾರ್ವಜನಿಕ ಕಂಪನಿಗಳಿಗಾಗಿ ಡಿಮ್ಯಾಟ್ ಕಡ್ಡಾಯ

ಕಾರ್ಪೊರೇಟ್ ವಹಿವಾಟುಗಳ ಮಂತ್ರಾಲಯವು (ಎಂಸಿಎ) ಸೆಪ್ಟೆಂಬರ್ ೧೦, ೨೦೧೮ ರಂದು ಒಂದು ಅಧಿಸೂಚನೆಯನ್ನು ಹೊರಡಿಸಿತು ಅದರ ಪ್ರಕಾರವಾಗಿ ಪಟ್ಟಿಮಾಡದ ಸಾರ್ವಜನಿಕ ನಿಯಮಿತ ಕಂಪನಿಗಳು ಸಹ ಠೇವಣಿ ವ್ಯವಸ್ಥೆಯನ್ನು ಸೇರ್ಪಡೆಯಾಗುವುದು ಅಗತ್ಯವಾಗಿರುತ್ತದೆ ಹಾಗು ಅವರು ಷೇರುಗಳನ್ನು ಡಿಮ್ಯಾಟಿನಲ್ಲಿ ಲಭ್ಯವಿರುವಂತೆ ಮಾಡುವುದು ಆವಶ್ಯಕ. ಈ ಕಂಪನಿಗಳಿಂದ ಇನ್ನುಮುಂದೆ ವಿತರಿಸುವ ಷೇರುಗಳು ಡಿಮ್ಯಾಟ್ ರೂಪದಲ್ಲಿ ಮಾತ್ರ ಸಾಧ್ಯವಾಗುತ್ತದೆ. ಇವೆರಡೂ ಅಗತ್ಯತೆಗಳು ಸಹ, ಅಕ್ಟೋಬರ್ ೨ ೨೦೧೮ ರಿಂದ ಜಾರಿಗೆ ಬಂದಿರುತ್ತವೆ. ಹೂಡಿಕೆದಾರರ ದೃಷ್ಟಿಕೋನದಿಂದ ನೋಡಿದರೆ, ಈಗ ಅಂತಹ ಪಟ್ಟಿ ಮಾಡದ ಕಂಪನಿಗಳಲ್ಲಿ ಇರುವ ತಮ್ಮ ಹಿಡುವಳಿಗಳನ್ನು ಡಿಮ್ಯಾಟ್ ರೂಪದಲ್ಲಿ ಪರಿವರ್ತಿಸಬಹುದು. ಹಾಗೂ ಅವುಗಳ ಜೊತೆಯಲ್ಲಿರುವ ಲಾಭಗಳನ್ನು ಪಡೆಯಬಹುದು. ಗಮನಿಸಬೇಕಾದ ವಿಷಯವೆಂದರೆ ಒಂದೊಮ್ಮೆ ನೀವು ಈಗಾಗಲೇ ಡಿಮ್ಯಾಟ್ ಖಾತೆ ಹೊಂದಿದ್ದರೆ ಈ ಷೇರುಗಳ ಹಿಡುವಳಿಗಾಗಿ ಮತ್ತೊಂದು ಡಿಮ್ಯಾಟ್ ಖಾತೆ ತೆರೆಯುವ ಅಗತ್ಯವಿಲ್ಲ. ಕಾಗದ ಪತ್ರದಲ್ಲಿರುವ ನಿಮ್ಮ ಹೂಡಿಕೆಗಳನ್ನು ಸಹ ಇದೇ ಡಿಮ್ಯಾಟ್ ಖಾತೆಯಲ್ಲಿ ಡಿಮ್ಯಾಟ್ ರೂಪದಲ್ಲಿ ಪರಿವರ್ತಿಸಬಹುದು, ಆದರೆ ಹಿಡುವಳಿಯ ಮಾದರಿ ಒಂದೇ ಆಗಿರಬೇಕು.

### ೪. ಹೂಡಿಕೆದಾರರ ಜಾಗೃತಿ ಕಾರ್ಯಕ್ರಮಗಳು

ಎನ್ಎಸ್ಡಿಎಲ್ ದೇಶಾದ್ಯಂತ ಹೂಡಿಕೆದಾರರ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅಂತಹ ಕಾರ್ಯಕ್ರಮಗಳ ವೇಳಾಪಟ್ಟಿಯು https://nsdl.co.in/Investor-Awareness-Programmes.php ಇಲ್ಲಿ ಲಭ್ಯವಿದೆ. ಒಂದೊಮ್ಮೆ ನಿಮ್ಮ ನಗರದಲ್ಲಿ, ವಸತಿ ಸಮುದಾಯದಲ್ಲಿ, ಕಾಲೇಜಿನಲ್ಲಿ, ವಿದ್ಯಾಸಂಸ್ಥೆಯಲ್ಲಿ ಮುಂತಾದ ಸ್ಥಳಗಳಲ್ಲಿ ಹೂಡಿಕೆದಾರರ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕೆಂದಿದ್ದರೆ, ನಮಗೆ ಇಮೇಲ್ ಮಾಡಿ info@nsdl.co.in

### 5. ಕುಂದುಕೊರತೆ ಪರಿಹಾರ

ಒಂದೊಮ್ಮೆ ನಿಮ್ಮ ಡಿಮ್ಯಾಟ್ ಖಾತೆಯ ಸಂಬಂಧವಾಗಿ ಯಾವುದೇ ಕುಂದುಕೊರತೆಗಳಿದ್ದರೆ, ದಯಮಾಡಿ ನಮಗೆ relations@nsdl.co.in ಇಮೇಲ್ ಮಾಡಿ ಅಥವಾ ನಿಮ್ಮ ದೂರನ್ನು ಸೆಬಿ ಅನ್ಲೈನ್ ನಲ್ಲಿ ದಾಖಲಿಸಬಹುದು https://scores.gov.in/scores/Welcome.html

### 6. ಎನ್ಡಿಎಂಎಲ್ ನ ಇತರೆ ಉಪಯುಕ್ತ ಸೇವೆಗಳು, ಎನ್ಎಸ್ಡಿಎಲ್ ನ ೧೦೦% ಅಂಗಸಂಸ್ಥೆ ಕಂಪನಿಗಳ

**I.**ಎನ್ಎಸ್ಆರ್ (ರಾಷ್ಟ್ರೀಯ ಕೌಶಲ್ಯಗಳ ರಿಜಿಸ್ಟ್ರಿ): ಎನ್ಎಸ್ಆರ್ ಎಂದರೆ ಒಂದು ವೆಬ್-ಆಧಾರಿತ ಸಿಸ್ಟಂ ಹೋಸ್ಟಿಂಗ್ ಆಗಿದ್ದು ಅದರಲ್ಲಿ ಭಾರತೀಯ ಐಟಿ ಮತ್ತು ಐಟಿಇಎಸ್/ ಬಿಪಿಒ ಉದ್ಯಮದ ಪಸ್ತುತ ಮತ್ತು ಸಂಭಾವಿತ ಉದ್ಯೋಗಿಗಳ ಬಗ್ಗೆ ಮಾಹಿತಿ ಇರುತ್ತದೆ. ಇದು ನಾಸ್ಕಾಂ ನ ಒಂದು ಉಪಕ್ರಮ. ಹೆಚ್ಚಿನ ಮಾಹಿತಿಗಾಗಿ, ದಯಮಾಡಿ ಬೇಟಿ ಮಾಡಿ https://nationalskillsregistry.com/

**II.**ಕೆವೈಸಿ ನೋಂದಣಿ ಏಜೆನ್ಸಿ: ಹೂಡಿಕೆದಾರ ಕೇಂದ್ರಿಕೃತ ಕೆವೈಸಿ ದಾಖಲೆಗಳ ಅಪ್ಲೋಡ್ ಮತ್ತು ಡೌನ್ಲೋಡ್. ಹೆಚ್ಚಿನ ಮಾಹಿತಿಗಾಗಿ ದಯಮಾಡಿ ಭೇಟಿ ಮಾಡಿ https://kra.ndml.in/

**III.**ರಾಷ್ಟ್ರೀಯ ಅಕಾಡಮಿ ಡೆಪಾಸಿಟರಿ (ಎನ್ಎಡಿ): ವಿದ್ಯಾರ್ಥಿಗಳಿಗೆ, ಪರಿಶೀಲಕರು ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶಸಾಧ್ಯವಾದ ಡಿಜಿಟೈಸ್ಡ್ ಅಧಿಕೃತ ಶೈಕ್ಷಣಿಕ ಪ್ರಮಾಣ ಪತ್ರಗಳು. ಹೆಚ್ಚಿನ ಮಾಹಿತಿಗಾಗಿ ದಯಮಾಡಿ ಭೇಟಿ ಮಾಡಿ https://nad.ndml.in/

**IV.** ಎನ್ಐಆರ್ ಖಾತೆ (ಇ-ವಿಮೆ ಖಾತೆ): ಎನ್ಡಿಎಂಎಲ್ ಭಾರತೀಯ ವಿಮಾ ನಿಯಂತ್ರಕ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್ಡಿಎಐ) ಪರವಾಗಿ ಒಂದು ವಿಮಾ ರೆಪಾಸಿಟರಿ ಅನ್ನು ಸ್ಥಾಪಿಸಿದೆ. ಅದು ಏಕೈಕ ಇ-ವಿಮಾ ಖಾತೆ (ಇ-ಐಎ) ನಲ್ಲಿ ವಿದ್ಯುನ್ಮಾನ ರೂಪದಲ್ಲಿ ಎಲ್ಲಾ ಬಗೆಯ ವಿಮಾ ಪಾಲಿಸಿಗಳ ಹಿಡುವಳಿಯ ಸೌಲಭ್ಯ ನೀಡುತ್ತದೆ ಹಾಗೂ ಏಕೈಕ ಲಾಗಿನ್ ಮೂಲಕ ಎಲ್ಲಾ ವಿಮಾ ಪಾಲಿಸಿಗಳನ್ನು ವೀಕ್ಷಿಸಲು ವಿಮೆದಾರರಿಗೆ ಅನುವು ಮಾಡಿಕೊಡೂತ್ತದೆ. ಈ ಖಾತೆಯನ್ನು ಉಚಿತವಾಗಿ ಯಾವುದೇ ಖರ್ಚಿಲ್ಲದೆ ತೆರೆಯಬಹುದು. ಹೆಚ್ಚಿನ ಮಾಹಿತಿಗಾಗಿ ದಯಮಾಡಿ ಭೇಟಿ ಮಾಡಿ https://www.nir.ndml.in/

NATIONAL SECURITIES DEPOSITORY LIMITED

NSDL
Technology, Trust & Reach

# ಅಭಿಪ್ರಾಯ ಪತ್ರ

(ನೀವು ನಮ್ಮ ಹೂಡಿಕೆದಾರರ ಜಾಗೃತಿ ಕಾರ್ಯಕ್ರಮಕ್ಕೆ ಹಾಜರಾದರೆ ಮಾತ್ರ ಈ ಪತ್ರ ಬಳಸಬೇಕು)

**ದಿನಾಂಕ** DD MM YYYY **ಸ್ಥಳ:**

| ಕಾರ್ಯಕ್ರಮದ ವಿವರಗಳು | ಕಳಪೆ | ತೃಪ್ತಿಕರ | ಉತ್ತಮ | ಅತ್ಯುತ್ತಮ |
|---|---|---|---|---|
| ಕಾರ್ಯಕ್ರಮಕ್ಕಾಗಿ ಮಾಡಿದ ವ್ಯವಸ್ಥೆಗಳು ನಿಮಗೆ ಎಷ್ಟು ಇಷ್ಟವಾಯಿತು | | | | |
| ಕೊಟ್ಟ ವಸ್ತುಗಳ ಗುಣಮಟ್ಟ | | | | |
| **ಅವಧಿ 1 ಕ್ಕಾಗಿ ತರಬೇತುದಾರರ ಮೌಲ್ಯಮಾಪನ - ಹೆಸರು:** | | | | |
| ಎ. ವಿಷಯದ ಪರಿಜ್ಞಾನ | | | | |
| ಬಿ. ಸಂವಹನ ಮತ್ತು ಪ್ರಸ್ತುತಿ | | | | |
| ಸಿ. ಪ್ರೇಕ್ಷಕರ ಜೊತೆಯಲ್ಲಿ ಮಾತುಕತೆ | | | | |
| **ಅವಧಿ 2 ಕ್ಕಾಗಿ ತರಬೇತುದಾರರ ಮೌಲ್ಯಮಾಪನ - ಹೆಸರು:** | | | | |
| ಎ. ವಿಷಯದ ಪರಿಜ್ಞಾನ | | | | |
| ಬಿ. ಸಂವಹನ ಮತ್ತು ಪ್ರಸ್ತುತಿ | | | | |
| ಸಿ. ಪ್ರೇಕ್ಷಕರ ಜೊತೆಯಲ್ಲಿ ಮಾತುಕತೆ | | | | |

- **ಹೂಡಿಕೆದಾರರ ಜಾಗೃತಿ ಕಾರ್ಯಕ್ರಮದ ಬಗ್ಗೆ ನಿಮಗೆ ಹೇಗೆ ಮಾಹಿತಿ ಸಿಕ್ಕಿತು? ದಯಮಾಡಿ ಅನ್ವಯಿಸುವ ಬಾಕ್ಸ್ ನಲ್ಲಿ ಟಿಕ್ ಮಾಡಿ.**

☐ **ಇಮೇಲ್** ☐ **ಎಸ್ಎಂಎಸ್** ☐ **ವಾರ್ತಪತ್ರಿಕೆ** ☐ **ಇತರೆ** ______________________

- **ಕಾರ್ಯಕ್ರಮವನ್ನು ಇನ್ನು ಉತ್ತಮಗೊಳಿಸಲು ನಿಮ್ಮ ಸಲಹೆಗಳು?**

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

- **ಒಂದೊಮ್ಮೆ ನಮ್ಮ ವಾರ್ತಪತ್ರವಾದ "ದಿ ಫೈನಾನ್ಶಿಯಲ್ ಕಾಲೆಡೊಸ್ಕೋಪ್" ಅನ್ನು ಸ್ವೀಕರಿಸಬೇಕೆಂದರೆ ದಯಮಾಡಿ ನಿಮ್ಮ ಇಮೇಲ್ ಐಡಿ ಸೂಚಿಸಿ**

------------------------------------------------------------

**ಹೆಸರು:**______________________ **ಮೊಬೈಲ್ ಸಂ:**______________________

NATIONAL SECURITIES DEPOSITORY LIMITED

NSDL
Technology, Trust & Reach

(অনুগ্রহ করে এই ফর্মটি পূরণ করুন এবং আমাদের দিন/পাঠান।)

1) ನಿಮಗೆ ಒಂದು ಡಿಮ್ಯಾಟ್ ಖಾತೆ ಇದೆಯೇ?

☐ ಹೌದು ☐ ಇಲ್ಲ

2) ಇಲ್ಲವಾದಲ್ಲಿ, ನೀವು ಒಂದು ಡಿಮ್ಯಾಟ್ ಖಾತೆಯನ್ನು ತೆರೆಯುವ ಆಸೆ ಇದೆಯೇ?

☐ ಹೌದು ☐ ಇಲ್ಲ

3) ಹೌದಾದರೆ, ಒಂದು ಡಿಮ್ಯಾಟ್ ಖಾತೆಯನ್ನು ತೆರೆಯುವುದಕ್ಕಾಗಿ ನಮ್ಮ ಡಿಪಿಗಳಲ್ಲಿ ಒಬ್ಬರು ನಿಮ್ಮನ್ನು ಸಂಪರ್ಕಿಸಬಹುದೇ?

☐ ಹೌದು ☐ ಇಲ್ಲ

4) ನೀವು ನಿಮ್ಮ ಮ್ಯುಚುವಲ್ ಫಂಡ್ ಯುನಿಟ್ ಗಳನ್ನು ಡಿಮ್ಯಾಟ್ ರೂಪದಲ್ಲಿ ಪರಿವರ್ತಿಸಬಹುದು ಎಂದು ನಿಮಗೆ ಗೊತ್ತೇ?

☐ ಹೌದು ☐ ಇಲ್ಲ

5) ನೀವು ಡಿಮ್ಯಾಟ್ ರೂಪದಲ್ಲಿ ನೇರವಾಗಿ ಮ್ಯುಚುವಲ್ ಫಂಡ್ ಯುನಿಟ್ ಗಳನು ಖರೀದಿಸಬಹುದು ಎಂದು ನಿಮಗೆ ಗೊತ್ತೆ?

☐ ಹೌದು ☐ ಇಲ್ಲ

6) ಡಿಮ್ಯಾಟ್ ರೂಪದಲ್ಲಿರುವ ನಿಮ್ಮ ಎಲ್ಲಾ ಹೂಡಿಕೆಗಳು ಮತ್ತು ಮ್ಯುಚುವಲ್ ಫಂಡ್ ಯುನಿಟ್ ಗಳ ವಿವರಗಳನ್ನು ಒಳಗೊಂಡ ಕ್ರೂಢೀಕೃತ ಖಾತೆ ಹೇಳಿಕೆಯನ್ನು ಎನ್ಎಸ್ಡಿಎಲ್ ಕಳುಹಿಸುತ್ತದೆ ಎಂದು ನಿಮಗೆ ಗೊತ್ತೇ?

☐ ಹೌದು ☐ ಇಲ್ಲ

## ಎನ್‌ಎಸ್ಡಿಎಲ್'ನ ಹೂಡಿಕೆದಾರರ ಕೇಂದ್ರಿಕೃತ ಉತ್ಪನ್ನಗಳು ಮತ್ತು ಸೇವೆಗಳು

### I).ಐಡಿಇಎಎಸ್

ಉನ್ನತೀಕರಿಸಿದ ಹಿಡುವಳಿ ಮತ್ತು ಮೌಲ್ಯಮಾಪನವನ್ನು ಅನ್ಲೈನ್ ಮೂಲಕ ನೋಡಲು ಹೂಡಿಕೆದಾರರಿಗೆ ಇರುವ ಸೌಲಭ್ಯ. ಕ್ಯುಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕಿಗೆ ಭೇಟಿ ನೀಡಿ https://eservices.nsdl.com/

### II)ಎನ್‌ಎಸ್ಡಿಎಲ್ ಮೊಬೈಲ್ ಆಪ್

ಪ್ರಯಾಣದಲ್ಲಿಯೂ ಯಾವುದೇ ಸಮಯದಲ್ಲಿ, ಎಲ್ಲಿ ಇದ್ದರೂ ಹಿಡುವಳಿಯ ಹೇಳಿಕೆಯನ್ನು ನೋಡುವುದಕ್ಕಾಗಿ ಮೊಬೈಲ್ ಆಪ್.
ಆಪ್ ಡೌನ್ಲೋಡ್ ಮಾಡಲು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಗೂಗಲ್ ಪ್ಲೇ ಸ್ಟೋರ್ ಮತ್ತು ಆಪಲ್ ಆಪ್ ಸ್ಟೋರಿನಲ್ಲಿ ಲಭ್ಯ.

ಪ್ಲೇ ಸ್ಟೋರಿಗಾಗಿ
https://play.google.com/store/apps/details?id=com.msf.NSDL.Android

ಆಪ್ ಸ್ಟೋರಿಗಾಗಿ
https://itunes.apple.com/in/app/nsdl/id922834763?mt=8

### III)ರಾಷ್ಟ್ರೀಯ ವಿಮಾ ಭಂಡಾರ (ಎನ್‌ಐಆರ್)

ಎಲ್ಲಾ ವಿಮಾ ಪಾಲಿಸಿಗಳನ್ನು ಇಟ್ಟುಕೊಳ್ಳಲು ಉಚಿತ ಇ-ವಿಮಾ ಖಾತೆ ಅಂದರೆ ಜೀವ ವಿಮೆ ಅಂತೆಯೇ ಇತರೆ ವಿಮೆ ಒಂದೇ ಸ್ಥಳದಲ್ಲಿ. ಇಂದೇ ಉಚಿತ ಇ-ವಿಮಾ ಖಾತೆ ತೆರೆಯಿರಿ ಕ್ಯುಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕಿಗೆ ಭೇಟಿ ನೀಡಿ

https://nironline.ndml.in/NIR/onlineEiaApplicationFormEkyc.html

### IV) ರಾಷ್ಟ್ರೀಯ ಶೈಕ್ಷಣಿಕ ಡೆಪಸಿಟರಿ (ಎನ್‌ಎಡಿ)

ಶೈಕ್ಷಣಿಕ ಪ್ರಮಾಣಪತ್ರಗಳನ್ನು ವೀಕ್ಷಿಸಲು ಉಚಿತ ಆನ್ಲೈನ್ ವಿದ್ಯಾರ್ಥಿಗಳ ಖಾತೆ. ಇಂದೇ ಎನ್‌ಎಡಿ ಖಾತೆಯನ್ನು ತೆರೆಯಿರಿ! ಕ್ಯುಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕಿಗೆ ಭೇಟಿ ನೀಡಿ
https://nad.ndml.in/NAD/newStudentRegistrationScreen.html

**ಟಿಪ್ಪಣಿಗಳು**

NSDL
Technology, Trust & Reach

# ಮುಖ್ಯ ಕಚೇರಿ

## ಮುಂಬಯಿ

೪ನೇ ಮಹಡಿ, "ಎ" ವಿಂಗ್, ಟ್ರೇಡ್ ವರ್ಲ್ಡ್, ಕಮಲ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪಟ್ ಮಾರ್ಗ್,
ಲೋವರ್ ಪ್ಯಾರೆಲ್, ಮುಂಬಯಿ - ೪೦೦೦೧೩ ದೂ.: (022) 2499 4200 ಇಮೇಲ್ info@nsdl.co.in

# ಶಾಖೆ ಕಚೇರಿಗಳು

## ಅಹ್ಮದಾಬಾದ್

402, 4ನೇ ಮಹಡಿ, ಹೆರಿಟೇಜ್ ಹಾರಿಜನ್, ಆಫ್ ಸಿ.ಜಿ ರಸ್ತೆ, ನವರಂಗಪುರ, ಅಹ್ಮದಾಬಾದ್ - 380009.
ದೂ.: (079) 2646 1375

## ಬೆಂಗಳೂರು

ಕಚೇರಿ ಸಂ. 106, ಡಿಬಿಎಸ್ ಹೌಸ್, 26, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು - 560052
ದೂ.: (080) 4040 7106

## ಚೆನ್ನೈ

6A, 6ನೇ ಮಹಡಿ, ಕೆನ್ಸೆಸ್ ಟವರ್, #1 ರಾಮಕೃಷ್ಣ ರಸ್ತೆ, ನಾರ್ತ್ ಉಸ್ಮಾನ್ ರಸ್ತೆ, ಟಿ. ನಗರ್,
ಚೆನ್ನೈ - 600017 ದೂ.: (044) 2814 3911 / (044) 2814 3917

## ಹೈದರಾಬಾದ್

ಕಚೇರಿ ಸಂ 123, ಹೈದರಾಬಾದ್ ರೆಗಸ್ ಮಿಡ್-ಟೌನ್, 1ನೇ ಮಹಡಿ, ಮಿಡ್ ಟೌನ್ ಪ್ಲಾಜಾ,
ರೋಡ್ ನಂ 1, ಬಂಜಾರ ಹಿಲ್ಸ್ ಹೈದರಾಬಾದ್ - 500033 ದೂ.: (040) 4433 4178

## ಕೊಚ್ಚಿ

ಸ್ವೀಟ್ ನಂ ಎಸ್ - 105, ಮೊನಲಾಶ್ ಬಿಸಿನೆಸ್ ಸೆಂಟರ್, 4ನೇ ಮಹಡಿ,
ಕ್ರೆಸ್ಕೆನ್ಸ್ ಟವರ್, ಎನ್ಎಚ್ 47, ಚಂಗಂಪುಳ ನಗರ ಪೋಸ್ಟ್, ಕೊಚ್ಚಿ - 682033 ದೂ.: (0484) 2933 075

## ಕೋಲ್ಕತ್ತಾ

ಯುನಿಟ್ 2E, 2ನೇ ಮಹಡಿ, ದಿ ಮಿಲೇನಿಯಂ, 235/2A, ಎ.ಜೆ.ಸಿ ಬೋಸ್ ರಸ್ತೆ, ಕೋಲ್ಕತ್ತಾ - 700020
ದೂ.: (033) 2290 4243 / (033) 2290 4246

## ನವ ದೆಹಲಿ

ಯುನಿಟ್ ಸಂ. 601, 603, 604, 6ನೇ ಮಹಡಿ, ಟವರ್-ಎ, ನವರಂಗ್ ಹೌಸ್, ಕಸ್ತೂರ್
ಬಾ ಗಾಂಧಿ ಮಾರ್ಗ್, ಕನ್ನೌಟ್ ಪ್ಲೇಸ್, ನವ ದೆಹಲಿ - 110001, ದೂ.: (011) 2335 3814 / (011) 2335 3815

**ಹೂಡಿಕೆದಾರರ ರಿಲೇಶನ್ಶಿಪ್ ಸೆಲ್**
**ಇಮೇಲ್:relations@nsdl.co.in**

November - 2019

**ಹೂಡಿಕೆದಾರರ ಸಹಾಯವಾಣಿ (ಟೋಲ್ ಫ್ರೀ)**
**1800 222 990**
**www.nsdl.co.in**